O.S.652014
ಪಿ ಡಬ್ಲ್ಯೂ-1

**ಸಾಕ್ಷಿಯನ್ನು ದಿನಾಂಕ 03-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**<u>ಮಧ್ಯಂತರ ಅರ್ಜಿಗಳ ಆದೇಶದ ಮೇರೆಗೆ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ SNH ವಕೀಲರಿಂದಃ</u>**

**1.** ಕರಾರು ಪತ್ರದ ಆಧಾರದ ಮೇಲೆ ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತೇನೆ. ದಾವಾ **1** ನೇ ಆಸ್ತಿಯ ಪೂರ್ವಕ್ಕೆ ಕಾಲುವೆ, ಪಶ್ಚಿಮ, ಉತ್ತರ ಮತ್ತು ದಕ್ಷಿಣಕ್ಕೆ **1** ನೇ ಪ್ರತಿವಾದಿಗೆ ಸೇರಿದ ಜಮೀನು. ದಾವಾ **2** ನೇ ಆಸ್ತಿಯ ಪೂರ್ವಕ್ಕೆ ಅದೇ ಸರ್ವೆ ನಂಬರ್ ನ ಜಮೀನು, ಪಶ್ಚಿಮಕ್ಕೆ ನಂಜುಂಡಯ್ಯನ ಜಮೀನು, ಉತ್ತರಕ್ಕೆ ರಂಗನಾಥಯ್ಯರವರ ಜಮೀನು, ದಕ್ಷಿಣಕ್ಕೆ ನಂಜುಂಡಯ್ಯರವರಿಗೆ ಸೇರಿದ ಜಮೀನು ಬರುತ್ತದೆ. ದಾವಾ ಆಸ್ತಿಗಳು ನನ್ನ ಭಾಗಕ್ಕೆ ಬಂದಂತಹ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನಾನು ವಿಭಾಗಕ್ಕಾಗಿ **O.S. 55/24** ದಾವೆಯನ್ನು ಸಲ್ಲಿಸಿರುತ್ತೇನೆಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ಕುಟುಂಬದ ಎಲ್ಲಾ ಅಸ್ತಿಗಳನ್ನು ಸೇರಿಸಿರುತ್ತೇನೆಂದರೆ ಸರಿ. ದಾವಾ ಆಸ್ತಿ ಮತ್ತು ಇತರ ಆಸ್ತಿಗಳನ್ನು ನನ್ನ ತಂದೆ ಮತ್ತು ಪ್ರತಿವಾದಿ ತಂದೆ ಒಟ್ಟು ಕುಟುಬಂದಲ್ಲಿದ್ದಾಗ ಕ್ರಯಕ್ಕೆ ಪಡೆದಿರುತ್ತಾರೆಂದರೆ ಸರಿ. ದಾವಾ **1** ನೇ ಆಸ್ತಿ ನನ್ನ ತಾಯಿಯ ಭಾಗಕ್ಕೆ ಬಂದ್ದಿರುತ್ತದೆ ಎಂದರೆ ಸರಿಯಲ್ಲ, **1** ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತದೆ. ನನ್ನ ತಾಯಿ ಮತ್ತು **1** ನೇ ಪ್ರತಿವಾದಿ ವಿಭಾಗಪತ್ರ ಬರೆದುಕೊಂಡಿರುತ್ತಾರೆಂದರೆ ಸರಿ.

**2.** ದಿಃ **06.03.2013** ರಂದು ಪ್ರತಿವಾದಿಗಳು ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆ. ಆ ರೀತಿ ಕರಾರು ಪತ್ರ ಬರೆದುಕೊಡುವ ಒಂದು ವಾರದ ಮೊದಲು ಮಾತುಕತೆಯು ಊರಿನಲ್ಲಿ ಮಧ್ಯಾಹ್ನ ಸುಮಾರು **12** ಗಂಟೆ ಸಮಯದಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ಆರ್ ಕೆ ತಿಮ್ಮಯ್ಯ, ಆರ್ ಕೆ ನಾಗರಾಜು, ಮತ್ತು ನಮ್ಮ ಗ್ರಾಮಸ್ಥರು ಇದ್ದರು. ಸದರಿಯವರು ನನ್ನ ದೂರದ ಸಂಬಂಧಿಕರು. ನಾನು ಹಣವನ್ನು ಕರಾರು ಪತ್ರದ ದಿನಾಂಕದಂದೇ ಕೊಟ್ಟಿರುತ್ತೇನೆ. ಆ ಸಮಯದಲ್ಲಿ ನಾರಾಯಣಪ್ಪ, ರಂಗನಾಥಯ್ಯ, ತಿಮ್ಮಯ್ಯ ಹಾಜರಿದ್ದೆವು. ನಾನು **500** ರೂ ಮುಖ ಬೆಲೆಯ ನೋಟುಗಳನ್ನು ನೀಡಿರುತ್ತೇನೆ.

**3.** ದಾವಾ ಆಸ್ತಿಗಳ ಖಾತೆಯನ್ನು ಬದಲಾವಣೆ ಮಾಡಿಸಿಕೊಳ್ಳಲು ಪ್ರತಿವಾದಿಗಳ ಸಹಿಗಳು ಬೇಕೆಂದು ನಾನು ಅವರ ಸಹಿಗಳನ್ನು ಪಡೆದುಕೊಂಡು ಕರಾರು ಪತ್ರವನ್ನು ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ಕರಾರು ಪತ್ರಕ್ಕೆ ಛಾಪಾ ಕಾಗದವನ್ನು ಪಾವಗಡ ಬ್ಯಾಂಕ್ ನಿಂದ ಮದ್ಯಾಹ್ನ **3.00** ಗಂಟೆಗೆ **1** ನೇ ಪ್ರತಿವಾದಿ

ಅವರ ಹೆಸರಿನಲ್ಲೇ ತಂದಿರುತ್ತಾರೆ. ಕರಾರು ಪತ್ರವನ್ನು ಸಂಜೆ **4** ಗಂಟೆಗೆ ತಾಲ್ಲೂಕ್ ಕಛೇರಿ ಬಳಿ ಬರೆದಿರುತ್ತಾರೆ. ಕರಾರು ಪತ್ರವನ್ನು ಬೆರಳಚ್ಚು ಮಾಡಿಸಿರುತ್ತಾರೆ. ಕರಾರು ಪತ್ರಕ್ಕೆ ಮಾಹಿತಿಯನ್ನು ಪ್ರತಿವಾದಿಗಳು ನೀಡಿರುತ್ತಾರೆ. ನಾನು ಮತ್ತು ಪ್ರತಿವಾದಿಗಳು ತಾಲ್ಲೂಕ್ ಕಛೇರಿ ಬಳಿ ಜೊತೆಯಲ್ಲೇ ಹೋಗಿರುತ್ತೇವೆ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಕರಾರು ಪತ್ರ ಬರೆದುಕೊಡಲು ಪ್ರತಿವಾದಿಗಳಿಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ, ಹಾಗೂ ಅವರು ಯಾವುದೇ ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

**4.** ನನ್ನ ತಾಯಿಗೆ ವಿಭಾಗದಲ್ಲಿ ಬಂದಂತಹ ಆಸ್ತಿಗಳನ್ನು ನಾನು ಮತ್ತು ನನ್ನ ಸಹೋದರ ವಿಭಾಗ ಮಾಡಿಕೊಂಡಿರುತ್ತೇವೆಂದರೆ ಸರಿಯಲ್ಲ. ನನ್ನ ತಾಯಿಗೆ ಬಂದಂತಹ ಆಸ್ತಿಗಳ ಖಾತೆಗಳನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಸಿಕೊಂಡಿರುವುದಿಲ್ಲ. ನನ್ನ ತಮ್ಮ ಕೆಲವು ಆಸ್ತಿಗಳ ಖಾತೆಗಳನ್ನು ಅವರ ಹೆಸರಿಗೆ ಬದಲಾಣೆ ಮಾಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ. ನನ್ನ ತಾಯಿ ಮತ್ತು **1** ನೇ ಪ್ರತಿವಾದಿ ಮಾಡಿಕೊಂಡ ಪಾರಿಕತ್ತು ನೊಂದಾವಣೆ ಆಗದೇ ಇರುವ ಕಾರಣ ಕೆಲವು ಆಸ್ತಿಗಳ ಖಾತೆಗಳು ನನ್ನ ತಾಯಿಯ ಹಾಗೂ ನನ್ನ ಹೆಸರಿಗೆ ಬದಲಾವಣೆ ಆಗಿರುವುದಿಲ್ಲ ಎಂದರೆ ಸರಿ. ಆ ಕಾರಣ ದಾವಾ ಆಸ್ತಿಗಳು ನನ್ನ ತಾಯಿಯ ಭಾಗಕ್ಕೆ ಬಂದಿದ್ದು ನಮ್ಮ ಹೆಸರಿಗೆ ಖಾತೆ ಪಹಣಿ ಬದಲಾವಣೆ ಮಾಡಿಕೊಳ್ಳುವ ಸಲುವಾಗಿ ನಿಪಿ-**1** ನ್ನು ನಾನು ಸೃಷ್ಟಿಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. **O.S. 55/24** ದಾವೆ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ. ಸುಳ್ಳು ಕರಾರು ಪತ್ರವನ್ನು ಸೃಷ್ಟಿ ಮಾಡಿಕೊಂಡು ಬಂದು ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.652014
ಪಿಡಬ್ಲ್ಯೂ-1

Bank manager Plaintiff by name M. Prince Amala saviour is present, filed his affidavit in lieu of chief examination and examined as PW-1 got marked Ex.P. 1 to 6.

Defendant placed exparte.

Hence cross of PW 1 taken as nil.

For argument by 04.03.2026.

Civil Judge and JMFC.
*Koratagere.*